

# ಕಂಬಳಿ ಹುಳದ ಶೃಂಗಾರ

ಚಿತ್ರ –ಬರಹ:
**ಪ್ರಸಾದ್ ಶೆಣೈ, ಆರ್.ಕೆ**





ಮುಂಗಾರಿನ ಜಡಿಮಳೆ ಮುಗಿದು ನಿಧಾನಕ್ಕೆ ಎಳೆಬಿಸಿಲು ಮೂಡುವಾಗ ಕಂಬಳಿ ಹುಳಗಳು ಗಿಡ, ಪೊದೆಗಳಲ್ಲಿ ತೂಗುತ್ತಾ ಧ್ಯಾನಸ್ಥ ಭಂಗಿಯಲ್ಲಿ ಕಾಣಿಸುವುದು ಸಾಮಾನ್ಯ. ಸೆಪ್ಟೆಂಬರ್ – ಅಕ್ಟೋಬರ್ ತಿಂಗಳೆಂದರೆ ಕಂಬಳಿ ಹುಳಗಳಿಗೆ ಹಬ್ಬ ಕಾಲ. ಅವತ್ತು ಸುಮ್ಮನೆ ತೋಟ ಅಡ್ಡಾಡ್ತಿದ್ದಾಗ ಕ್ರೋಟಾನ್ ಪೊದೆಗಳ ನಡುವೆ ಚಂದದ ಕಂಬಳಿಹುಳವೊಂದು ಕಾಣಿಸಿತು. ಅದರ ಶೃಂಗಾರ ಭಂಗಿಗಳನ್ನು ಕಂಡು ಚಕಿತನಾದೆ.

ರತ್ನಗಂಬಳಿ ಹಾಸಿದಂತಿದ್ದ ಅದರ ಮೈ ಮೇಲೆ ನೇರಳೆ ಚುಕ್ಕಿ ಹಾಗೂ ರೋಮಗಳಿದ್ದವು. ಗಿಡದ ಗೆಲ್ಲೊಂದಕ್ಕೆ ತನ್ನ ಬೆನ್ನಿನ ಭಾಗವನ್ನು ಸುತ್ತಿ ಮುಖವನ್ನು ರೆಂಬೆಯಿಂದ ಒಂದೆರಡು ಮೀಟರ್ ಮುಂದಕ್ಕೆ ಚಾಚಿದರೂ, ಸ್ವಲ್ಪವೂ ಬಾಗದೆ ಸಮಾನಾಂತರ ಸ್ಥಿತಿಯಲ್ಲಿಯೇ ಇತ್ತು. ನೋಡಲು ಸಾಮಾನ್ಯ ಕಂಬಳಿ ಹುಳಗಳಿಗಿಂತ ದಷ್ಟಪುಷ್ಟವಿತ್ತು.

ಶೃಂಗಾರವೇನೋ ಸರಿಯೇ. ಇಂತಹ ಹುಳದ ಒಂದು ರೋಮ ತಾಗಿದರೂ ಸಾಕು, ಅಸಾಮಾನ್ಯ ತುರಿಕೆ ಕಟ್ಟಿಟ್ಟ ಬುತ್ತಿ. ಅದರ ಮೈಮೇಲಿನ ರೋಮದ ಸೂಕ್ಷ್ಮಾತಿಸೂಕ್ಷ್ಮ ರಾಸಾಯನಿಕ ಎಳೆಗಳು ಕೆಲವೊಮ್ಮೆ ತೀವ್ರ ತುರಿಕೆಯನ್ನುಂಟು ಮಾಡುತ್ತವೆ. ಆದರೆ ಕೆಲವು ಕಂಬಳಿ ಹುಳಗಳು ಮೈ ಸೋಕಿ ಹೋದರೂ ತುರಿಕೆಯಾಗುವುದಿಲ್ಲ.